
(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

# ಶ್ರೀಚೈತನ್ಯ ಮಹಾಪ್ರಭು – ೪

ಸ್ವಾಮಿ ತಪಸ್ಯಾನಂದ

## ನಿಮಾಯಿಯ ಬದಲಾಗುತ್ತಿದ್ದ ಭಾವನೆಗಳು

ಅಂದಿನ ದಿನಗಳಲ್ಲಿ ನಿಮಾಯಿಯ ಮನೋಭಾವಗಳು ಅಡಿಗಡಿಗೆ ಬದಲಾಗುತ್ತಿದ್ದವು. ಭಗವಂತನಿಗಾಗಿ ಹಂಬಲಿಸುವ ಭಕ್ತನ ಭಾವದಿಂದ, ಒಡನೆಯೆ, ತನ್ನ ಸುತ್ತಲಿನ ಎಲ್ಲರಿಂದ ಪೂಜ್ಯಭಾವವನ್ನು ಸೆಳೆದುಕೊಳ್ಳುತ್ತಿದ್ದ ಭಗವಚ್ಛಕ್ತಿಯ ವೈಭವ ಮತ್ತು ಶಕ್ತಿಗಳು ಅವನಲ್ಲಿ ಒಡಮೂಡುತ್ತಿದ್ದವು. ಇದಕ್ಕೆ ಒಂದು ಉದಾಹರಣೆ ಹೀಗಿದೆ. ಈ ಘಟನೆ ನಡೆದಿದ್ದೂ ಈಗಾಗಲೇ ಇದೇ ತರಹದ ಇನ್ನೊಂದು ಘಟನೆ ನಡೆದ ಭಕ್ತ ಶ್ರೀವಾಸನ ಮನೆಯಲ್ಲಿಯೆ. ಒಮ್ಮೆ ನಿಮಾಯಿ ಭಗವಾನ್ ವಿಷ್ಣುವಿಗೆ ಮುಡುಪಾಗಿಟ್ಟಿದ್ದ ಆಸನದಲ್ಲಿ, ದಿವ್ಯಭಾವದಲ್ಲಿ ಕುಳಿತು ಕೊಂಡಿದ್ದ. ಭಕ್ತರೆಲ್ಲರೂ ಅವನನ್ನು ಸುತ್ತುವರಿದಿದ್ದರು. ಅವನ ಶರೀರದಿಂದ ಹೊರಹೊಮ್ಮಿದ ಕಾಂತಿಯಿಂದ ಆ ಕೊಠಡಿ ಯೆಲ್ಲವೂ ಪ್ರಜ್ವಲಿತವಾಗಿತ್ತು. ಮಧುರವಾದ ಮುಗುಳ್ನಗು ಮತ್ತು ವರ್ಣನಾತೀತ ಸೌಂದರ್ಯ ಅವನ ಮುಖದಲ್ಲಿ ಶೋಭಿಸುತ್ತಿತ್ತು. ಜಗನ್ನಿಯಾಮಕನಾದ ಜಗನ್ನಾಥ ಸ್ವಾಮಿಯ ಎದುರಿಗೇ ತಾವೆಲ್ಲ ಇರುವೆವು ಎಂದು ಸುತ್ತಲಿನ ಜನರೆಲ್ಲ ಭಾವಿಸಿದರು; ರಾಶಿರಾಶಿಯಾಗಿ ಹೂವುಗಳನ್ನು ತಂದರು. ಭಕ್ತರ ಭಾರೀ ಗುಂಪು ಸೇರಿತ್ತಾದರೂ, ಗದ್ದಲವಾಗಲಿ ನೂಕುನುಗ್ಗ ಲಾಗಲಿ ಅಲ್ಲಿ ಕಾಣಬರುತ್ತಿರಲಿಲ್ಲ. ಆ ಅದ್ಭುತ ದೈವೀಸಾನ್ನಿಧ್ಯ ದಲ್ಲಿ ಇತರರ ಇರುವಿಕೆಯನ್ನೇ ಮರೆತು ಭಕ್ತಿಭಾವದಲ್ಲಿ ಪ್ರತಿ ಯೊಬ್ಬರೂ ಮಗ್ನರಾಗಿ ಹೋಗಿದ್ದರು. ಅವರೆಲ್ಲರೂ ಅಧಿಕ ಪ್ರಮಾಣದಲ್ಲಿ ಆಹಾರ ಪದಾರ್ಥಗಳನ್ನು ನೈವೇದ್ಯವಾಗಿ ಅವನಿಗೆ ಅರ್ಪಿಸಿ, ಅವುಗಳನ್ನು ಸೇವಿಸುವಂತೆ ಒತ್ತಾಯಿಸು ತ್ತಿದ್ದರು. ಆಶ್ಚರ್ಯವೆಂದರೆ, ಸಾವಿರ ಜನಕ್ಕೆ ಸಾಕಾಗುವಷ್ಟು ಆಹಾರವನ್ನು ಸೇವಿಸಿದರೂ ನಿಮಾಯಿಯ ಹಸಿವೆ ತಣಿಯಲೇ ಇಲ್ಲ. ಭಗವದವತಾರವಾದ ಅವನು ಮೌನಿಯೂ ಪ್ರಶಾಂತನೂ ಆಗಿ ಕುಳಿತುಕೊಂಡಿದ್ದ. ಮತ್ತೊಂದು ವಿಚಿತ್ರ ವೆಂದರೆ, ಪ್ರತಿಯೊಬ್ಬ ಭಕ್ತನಿಗೂ ನಿಮಾಯಿ ತನ್ನನ್ನೇ ನೋಡು ತ್ತಿರುವಂತೆ ಭಾಸವಾಗುತ್ತಿತ್ತು. ಅಷ್ಟರೊಳಗೆ ಸಂಜೆಯಾಯಿತು. ಸಂಧ್ಯಾರತಿಯನ್ನು ಬೆಳಗಬೇಕೆಂದು ಭಕ್ತರೆಲ್ಲರೂ ಅಂದು



ಕೊಂಡರು. ಅದಕ್ಕೆ ನಿಮಾಯಿಯ ತಾಯಿ ಶಚೀದೇವಿಯೆ ಸರಿಯೆಂದು ಜನರು ಆಕೆಯನ್ನು ಕರೆತಂದರು. ಆಕೆಯ ಮಗನು ಸರ್ವರ ಪ್ರಭುವಾದ ಭಗವಂತನಲ್ಲದೆ ಬೇರಲ್ಲ ಎಂದು ಅವಳಿಗೆ ಮನಗಾಣಿಸಿದರು. ಆ ವೃದ್ಧ ಮಹಿಳೆ ತನ್ನ ಮಗನಿಗೆ ಬಾಗಿ ನಮಿಸಿದಳು. ಇದುವರೆಗೂ ತನ್ನ ತಾಯಿಯೆಂದು ಗೌರವಿಸುತ್ತಿದ್ದ ಆಕೆಯ ತಲೆಯ ಮೇಲೆ, ಆ ದಿವ್ಯಭಾವದಲ್ಲಿ ನಿಮಾಯಿ ತನ್ನ ಪಾದಗಳನ್ನಿರಿಸಿದ! ಒಡನೆ ಅವಳೂ ಭಾವಾವಿಷ್ಟಳಾದಳು ಮಾತ್ರವಲ್ಲ, ನರ್ತಿಸಲು ಕೂಡ ಆರಂಭಿಸಿ ದಳು. ಸಂಸ್ಕೃತಭಾಷೆಯ ಪರಿಜ್ಞಾನವಿಲ್ಲದಿದ್ದರೂ ಭಾಗವತದಲ್ಲಿ ಬರುವ, ತಾಯಿ ದೇವಕಿ ತನ್ನ ಮಗ ಶ್ರೀಕೃಷ್ಣನನ್ನು ಕುರಿತು ಮಾಡಿದ ಸ್ತೋತ್ರವೊಂದನ್ನು ಆ ಸಮಯದಲ್ಲಿ ಪಠಿಸಿದಳು.

ನಂತರ ನಿಮಾಯಿ ಕೆಲ ಭಕ್ತರನ್ನು ಪ್ರತ್ಯೇಕವಾಗಿ ಕರೆದು ಮಾತನಾಡಿಸಿದ. ಬಾಳೆ ಎಲೆಗಳನ್ನು ಸರಬರಾಜು ಮಾಡುವ ಶ್ರೀಧರನೆಂಬ ಸಾಮಾನ್ಯ ವ್ಯಕ್ತಿಯನ್ನೂ ಕರೆದು ಅನುಗ್ರಹಿಸಿದ. ನಿಮಾಯಿಯ ಸ್ಪರ್ಶದಿಂದ ಅವನೂ ಭಾವಾವಿಷ್ಟನಾದ. ಶ್ರೀಧರನು ಕೇಳಿದರೆ ರಾಜ್ಯವನ್ನೇ ದಯಪಾಲಿಸುವೆನೆಂದ ನಿಮಾಯಿ. ಆದರೆ ಶ್ರೀಧರ ಕೇಳಿಕೊಂಡದ್ದು, ತಾನು ಭಗವದ್ಭಕ್ತರ ದಾಸನಾಗಿರುವ ಸೌಭಾಗ್ಯವನ್ನು ಮಾತ್ರ.

ನಂತರ ನಿಮಾಯಿ, ಮುರಾರಿ ಎಂಬ ರಾಮಭಕ್ತನನ್ನು ಕರೆದ. ಅವನು ನಿಮಾಯಿಯ ಶರೀರದಲ್ಲಿ ತನ್ನ ಉಪಾಸ್ಯ ಮೂರ್ತಿಗಳಾದ ರಾಮಸೀತೆಯರನ್ನೇ ಕಂಡ. ನಿಮಾಯಿ ಮುರಾರಿಗೆ " ತಾಂತ್ರಿಕ ಪವಾಡಗಳಲ್ಲಿ ಆಸಕ್ತಿಯನ್ನು ತೊರೆ, ಅವುಗಳಿಂದ ಭಗವತ್ಪ್ರಾಪ್ತಿಯಾಗಲಾರದು." ಎಂದು ಎಚ್ಚರಿಸಿದ. ಆ ಮೂಲಕ ಅವನು ಅದ್ವೈತ ಆಚಾರ್ಯನಿಗೂ ಬೋಧಿಸಿದಂತಾಯಿತು.

ನಂತರ ಕರೆದಿದ್ದು ಮುಸ್ಲಿಂ ಭಕ್ತನಾದ ಹರಿದಾಸನನ್ನು. ಛಡಿಯೇಟುಗಳು ತನ್ನ ಮಾಂಸವನ್ನೇ ಕತ್ತರಿಸಿಹಾಕುತ್ತಿರುವಾಗಲೂ ತನಗೆ ಯಾವುದೇ ತರದ ನೋವು ಉಂಟಾಗಲಿಲ್ಲವೆಂದು ಅವನು ನೆರೆದಿದ್ದ ಭಕ್ತರೆದುರು ಪ್ರಮಾಣ ಮಾಡಿ ಹೇಳಿದ. ನಂತರ ನಿಮಾಯಿ ಯಾರಿಗಾದರೂ ಏನಾದರೂ ವರ ಬೇಕೆ? ಎಂದು ಕೇಳಿದಾಗ, ಅವರೆಲ್ಲರೂ ಭಕ್ತಿಯನ್ನು ಬಿಟ್ಟು ಬೇರೇನನ್ನೂ ಯಾಚಿಸಲು ನಿರಾಕರಿಸಿದರು. ಮುಕುಂದನೆಂಬ ಭಕ್ತ ಬಹಳ ಸಾಧು ಸ್ವಭಾವದವನು. ಅವನನ್ನು ನಿಮಾಯಿ ಕರೆಯಲೇ ಇಲ್ಲ. ನಿರ್ಲಕ್ಷ್ಯಕ್ಕೆ ಗುರಿಯಾದ ಮುಕುಂದ ಮನೆಯ ಹೊರಗಡೆ ನಿಂತು ಅಳುತ್ತಿದ್ದ. ಅವನನ್ನು ಏಕೆ ತಾನೆ ನಿರ್ಲಕ್ಷಿಸಿದೆಯೆಂದು ಶ್ರೀವಾಸ ನಿಮಾಯಿಯನ್ನು ಪ್ರಶ್ನಿಸಿದ. ಅದಕ್ಕೆ ನಿಮಾಯಿ, ಮುಕುಂದನು ಮುಕ್ತಿ ಹೊಂದುವುದು ಒಂದು ಕೋಟಿ ಜನ್ಮಗಳ ನಂತರವೆ ಎಂದು ಉತ್ತರಿಸಿದ. ಮುಕುಂದನಿಗೆ ಅದು ತಿಳಿದಾಗ, ಅವನ ಸಂತೋಷಕ್ಕೆ ಪಾರವೇ ಇರಲಿಲ್ಲ. ಮಹಾಭಕ್ತನಾದ ಅವನು, ಅಷ್ಟೊಂದು ಜನ್ಮಗಳ ಕಾಲ ಕಾಯಬೇಕಲ್ಲ ಎಂದು ಕಾತರಿಸಲೇ ಇಲ್ಲ. ಅಷ್ಟು ಜನ್ಮಗಳ ನಂತರವಾದರೂ ಭಗವದ್ದರ್ಶನವಾಗುವುದಲ್ಲಾ ಎಂಬ ಸಂತೃಪ್ತಿ ಅವನಿಗೆ. ನಂತರ ಮುಕುಂದನನ್ನು ನಿಮಾಯಿಯೆಡೆಗೆ ಭಕ್ತರು ಕರೆತಂದರು. ಆಗ ನಿಮಾಯಿ ತಾನು ಹಾಗೆ ಹೇಳಿದ್ದು ಮುಕುಂದನ ಶ್ರದ್ಧೆಯನ್ನು ಪರೀಕ್ಷಿಸಲೆಂದು ಮತ್ತು ಅದರ ಮೂಲಕ ಇತರರಿಗೆ ನಿಜವಾದ ಭಕ್ತಿ ಮತ್ತು ಶರಣಾಗತಿಯೆಂದರೇನೆಂದು ಪರಿಚಯಿಸಲೆಂದು ಎಂದು ಹೇಳಿದ.

ಸರ್ವಶಕ್ತನಾದ ಭಗವಂತನ ಈ ಬಗೆಯ ದಿವ್ಯಭಾವ ನಿಮಾಯಿಯಲ್ಲಿ ಅಂದಿನ ಮಧ್ಯರಾತ್ರಿಯವರೆಗೂ ಮುಂದುವರಿಯಿತು. ನಂತರ ಮಧುರಭಾವ ತಲೆಯೆತ್ತಿತು. ಪರಿಪೂರ್ಣನಾದ ಪರಮಾತ್ಮನ ಚಿರನೂತನ ಸೌಂದರ್ಯ ತಮ್ಮ ಕಣ್ಣುಗಳನ್ನು ಸೂರೆಗೊಳ್ಳುತ್ತಿರುವುದನ್ನು ಭಕ್ತರೆಲ್ಲರೂ ಭಾವಿಸಿದರು. ಪ್ರತಿಯೊಬ್ಬ ಭಕ್ತನನ್ನೂ ಕರೆಕರೆದು ನಿಮಾಯಿ ಅಪ್ಪಿಕೊಂಡ. ಆಗ ಅವರೆಲ್ಲ ಶ್ರೀಕೃಷ್ಣ, ರಾಧೆ ಮತ್ತು ಗೋಪಿಯರ ಬಾಂಧವ್ಯದ ನೈಜ ಸ್ವರೂಪವನ್ನು ಪರಿಚಯ ಮಾಡಿಕೊಂಡರು. ಸ್ವಲ್ಪ ಸಮಯದ ಹಿಂದೆ ಆವಿರ್ಭವಿಸಿದ್ದ ಭಗವಚ್ಛಕ್ತಿಯ ಆವಿರ್ಭಾವವನ್ನು ತಡೆದುಕೊಳ್ಳಲು ಅವರಿಗೆ ಹೇಗೆ ಅಸಾಧ್ಯವಾಗಿತ್ತೋ ಅದೇ ರೀತಿ ಈಗ ನಿಮಾಯಿಯಲ್ಲಿ ವ್ಯಕ್ತಗೊಳ್ಳುತ್ತಿದ್ದ ಭಗವಂತನ ಅಪ್ರತಿಮ ಮಧುರತೆಯನ್ನೂ ಭಕ್ತರು ಬಹಳ ಹೊತ್ತು ಭರಿಸಲಾರದಾದರು. ಆದ್ದರಿಂದ ಅವರೆಲ್ಲ ಹಿಂದಿನಂತೆ ಮಾನವರೂಪವನ್ನು ಧಾರಣೆ ಮಾಡುವಂತೆ ಅವನನ್ನು ಕೇಳಿಕೊಂಡರು, ತನ್ನ ಈ ಪರಮಾದ್ಭುತ ದಿವ್ಯಸಾನ್ನಿಧ್ಯದ ಪ್ರಖರತೆಯಿಂದ ತಮ್ಮನ್ನು ಬಿಡುಗಡೆ ಮಾಡುವಂತೆ ಪ್ರಾರ್ಥಿಸಿದರು. "ಹಾಗೇ ಆಗಲಿ" ಎಂದ ನಿಮಾಯಿ ಹಟಾತ್ತನೆ, ಚೀರುತ್ತ, ನೆಲದ ಮೇಲೆ ಬಿದ್ದ. **ಮಹಾಪ್ರಕಾಶ** ಎಂದು ಕರೆಯುವ ಮಾಹಾತ್ಮ್ಯದ ಅಪೂರ್ವ ಪ್ರಕಾಶನ ಹೀಗೆ ವ್ಯಕ್ತವಾಯಿತು. ತನ್ನ ಸಹಜ ಪ್ರಜ್ಞೆಯನ್ನು ಮತ್ತೆ ಪಡೆಯಲು ನಿಮಾಯಿಗೆ ಅನೇಕ ಕಾಲ ಬೇಕಾಯಿತು. ಮೃತ್ಯುವಿನ ಎಲ್ಲ ಲಕ್ಷಣಗಳೂ ಅವನ ಮುಖದಲ್ಲಿ ಮೂಡಿದವು. ಆದರೆ ಸಖಿಯರು ತಮ್ಮೊಡತಿ ರಾಧೆಯನ್ನು ಕುರಿತು ಹಾಡುವ ಗೀತೆಯೊಂದನ್ನು ಹಾಡಿದಾಗ, ಸಹಜ ಮಾನವಪ್ರಜ್ಞೆಯೊಡನೆ ಅವನ ಸಂಪರ್ಕ ನಿಧಾನವಾಗಿ ಮರುಕಳಿಸಿತು. ಅದನ್ನು ಕಂಡು ಹರ್ಷಾತಿರೇಕದಿಂದ, 'ಹರಿ ಬೋಲ್' ಎಂಬ ಘೋಷಣೆಯನ್ನು ಅಡಿಗಡಿಗೆ ಉದ್ಘೋಷಿಸುತ್ತ ಭಕ್ತರು ನರ್ತಿಸಲು ಆರಂಭಿಸಿದರು.

### ಜಗಾಯಿ ಮತ್ತು ಮಾಧಾಯಿಯರ ಪರಿವರ್ತನೆ

ನಿಮಾಯಿ ಮತ್ತು ಅವನ ಸಂಗಡಿಗರು ಹರಿಕೀರ್ತನೆಯನ್ನು ನಡೆಸುತ್ತಿದುದು ಮುಖ್ಯವಾಗಿ ರಾತ್ರಿ ವೇಳೆಯಲ್ಲಿ, ಕದ ಮುಚ್ಚಿದ ಮನೆಗಳ ಒಳಗೆ. ಅದರಲ್ಲಿ ಪಾಲ್ಗೊಳ್ಳುವ ಭಕ್ತರಲ್ಲಿ ಬಹಳಷ್ಟು ಜನ ಕೆಳಜಾತಿಗೆ ಸೇರಿದವರಾಗಿದ್ದರು. ಇದನ್ನು ನೋಡಿ ಸಮಾಜದ ಕೆಲವು ವರ್ಗದವರು ಟೀಕಿಸಲು ಆರಂಭಿಸಿದರು. ಅದರಲ್ಲೂ ತಮ್ಮ ವಿದ್ವತ್ತು ಮತ್ತು ಮೇಲ್ವರ್ಗದ ಘನತೆಯ ಅಹಂಕಾರದಿಂದ ಮತ್ತರಾಗಿದ್ದ ಕೆಲವು ಬ್ರಾಹ್ಮಣರಿಗೆ ಇದನ್ನು ಸಹಿಸಲಾಗಲಿಲ್ಲ. ನಿಮಾಯಿ ಮತ್ತು ಅವನ ಅನುಯಾಯಿಗಳು ಇನ್ನು ಮುಂದೆ ತಮ್ಮ ದಿನದ ಸಮಯವನ್ನು ವ್ಯರ್ಥಮಾಡದೆ, ಕೃಷ್ಣಭಕ್ತಿಯ ಅಮರ ಸಂದೇಶವನ್ನು ಮನೆಮನೆಗಳಿಗೆ ಕೊಂಡೊಯ್ಯಬೇಕೆಂದು ನಿರ್ಧರಿಸಿದರು. ಪರಿಶುದ್ಧ ತ್ಯಾಗದಿಂದ ಎಲ್ಲ ಬಗೆಯ ಪಾಪಪ್ರಜ್ಞೆ ಮತ್ತು ಸಂಕಟಗಳ ಬೀಜವಾದ ಕಾಮಲೋಲುಪತೆಯನ್ನು ಜಯಿಸುವುದೇ ಸಾಂಪ್ರದಾಯಿಕ ವಿಧಾನ. ಅದಕ್ಕೆ ಬದಲಾಗಿ, ಅದಕ್ಕೊಂದು ಉನ್ನತ ದಿಶೆಯನ್ನು ಕಲ್ಪಿಸುವ ಮಾರ್ಗವಾಗಿ ಭಕ್ತಿಯನ್ನು, ನಿಮಾಯಿ ಮತ್ತು ಅವನ ಅನುಯಾಯಿಗಳು ಜನ ಸಾಮಾನ್ಯರಲ್ಲಿ ಎತ್ತಿಹಿಡಿದರು. ತ್ಯಾಗಶಿರೋಮಣಿಯಾದ ಶಿವನು ತನ್ನ ಕ್ರೋಧದ ನೋಟದಿಂದಲೇ ಕಾಮನನ್ನು ಸುಟ್ಟು ಬೂದಿ ಮಾಡಿದನು. ಆದರೆ ಮದನಮೋಹನನಾದ

ಶ್ರೀಕೃಷ್ಣನು ಆ ಕಾಮನನ್ನೇ ಮೋಹಗೊಳಿಸುವ ಮನಮೋಹಕನು. ಆದ್ದರಿಂದ ನಿಮಾಯಿ ಮತ್ತು ಅವನ ಸಂಗಡಿಗರು ಶ್ರೀಕೃಷ್ಣ-ಕೀರ್ತನೆ ಮತ್ತು ಪವಿತ್ರ ಜೀವನದ ಸಂದೇಶಗಳ ಮೂಲಕ ಕೃಷ್ಣ ಭಕ್ತಿಯನ್ನು ಮನೆಮನೆಗೆ, ಮನಮನಗಳಿಗೆ ತಲುಪಿಸುವ ಸಂಕಲ್ಪವನ್ನು ಕೈಗೊಂಡರು. ಸಾಮಾನ್ಯ ಜನರು ಬಹುಸಂಖ್ಯೆಯಲ್ಲಿ ಈ ಕರೆಗೆ ಪ್ರತಿಕ್ರಯಿಸಿದರಾದರೂ ಜಂಭದ ಬ್ರಾಹ್ಮಣರು, ಈ ವೈಷ್ಣವರು ಕಳ್ಳರ ಪರವಾಗಿ ಗೂಢಚರ್ಯೆ ನಡೆಸಲು ಮನೆಮನೆಗೆ ಬರುತ್ತಿದ್ದಾರೆಂದು ವ್ಯಾಖ್ಯಾನ ಮಾಡಿದರು.

ನಿತ್ಯಾನಂದ ಇದಕ್ಕೊಂದು ಪರಿಹಾರ ಕಂಡುಹಿಡಿದು ಅದನ್ನು ಹರಿದಾಸನಿಗೆ ಸೂಚಿಸಿದ. ಅದೇನೆಂದರೆ ಜಗಾಯಿ, ಮಾಧಾಯಿಯರನ್ನು ಪರಿವರ್ತಿಸುವುದು. ಇದರಿಂದ ತಮ್ಮ ನಿಂದಕರ ಮನಸ್ಸಿನ ಮೇಲೆ ಪರಿಣಾಮ ಉಂಟಾಗುವುದೆಂದು ಅವನ ಭಾವನೆ. ಜಗಾಯಿ, ಮಾಧಾಯಿಯರೆಂದರೆ ಯಾರು? ಇವರಿಬ್ಬರೂ ಕೊತ್ವಾಲರು ಅಂದರೆ ಆರಕ್ಷಣಾ ಅಧಿಕಾರಿಗಳು. ಇಷ್ಟಾದರೂ, ಇವರೀರ್ವರೂ ಕುಡುಕರು ಮತ್ತು ದುಷ್ಟರೆಂದು, ಪ್ರಜಾಪೀಡಕರೆಂಬುದು ಎಲ್ಲರಿಗೂ ತಿಳಿದ ವಿಷಯವಾಗಿತ್ತು. ಹೀಗಾಗಿ ಅವರೆಂದರೆ ಜನರಿಗೆ ಅತಿ ಹೆಚ್ಚು ಭಯ. ನಿತ್ಯಾನಂದರು ಮತ್ತು ಹರಿದಾಸರು ಮೊದಲು ಶ್ರೀಕೃಷ್ಣಭಕ್ತಿಯ ಸಂದೇಶವನ್ನು ಹೊತ್ತು ಅವರೆಡೆಗೆ ಹೋದಾಗ, ಅವರನ್ನು ಅಗೌರವದಿಂದ ಕಂಡು, ಅಪಹಾಸ್ಯ ಮಾಡಿ ಓಡಿಸಿಬಿಟ್ಟರು, ಜಗಾಯಿ ಮತ್ತು ಮಾಧಾಯಿ. ನಿತ್ಯಾನಂದ ಅಲ್ಲಿಗೆ ಸುಮ್ಮನಾಗಲಿಲ್ಲ. ದೊಡ್ಡದೊಂದು ಕೀರ್ತನೆಯ ಗುಂಪು, ನಿಮಾಯಿಯನ್ನು ಮಧ್ಯೆ ಇರಿಸಿಕೊಂಡು, ಅವರಿಬ್ಬರ ಹತ್ತಿರ ಹೋಯಿತು. ಕೀರ್ತನೆಯ ಗದ್ದಲ ಮಧ್ಯಾಹ್ನದ ಸುಖನಿದ್ದೆಯಲ್ಲಿ ಮುಳುಗಿದ್ದ ಆ ದುಷ್ಟರನ್ನು ಕಂಗೆಡಿಸಿತು. ಕೋಪಾವೇಶಗೊಂಡ ಅವರು ಗುಂಪಿನ ನಾಯಕರಾದ ನಿತ್ಯಾನಂದ ಮತ್ತು ಹರಿದಾಸರ ಮೇಲೆ ದೊಡ್ಡ ದೊಡ್ಡ ಇಟ್ಟಿಗೆಗಳನ್ನು ಎಸೆದರು. ನಿತ್ಯಾನಂದ ಗಾಯಗೊಂಡ. ಅವನ ಶರೀರದಿಂದ ಬಹಳ ರಕ್ತ ಸುರಿಯುತ್ತಿದ್ದರೂ, ಭಗವನ್ನಾಮವನ್ನು ಹಾಡುತ್ತ ನರ್ತಿಸುತ್ತಲೇ ಇದ್ದ. ಕಡೆಗೆ ನಿಮಾಯಿಯೇ ಆ ದುಷ್ಟರ ಮುಂದುಗಡೆ ಹೋಗಿ ನಿಂತ. ಆಗ ಜಗಾಯಿ ಮತ್ತು ಮಧಾಯಿಯರು ಭಯಂಕರವೂ ಅಭೇದ್ಯವೂ ಆದ ಬೆಂಕಿಯ ಉಂಡೆಯೊಂದು ಅವರತ್ತ ನುಗ್ಗಿ ಬರುತ್ತಿರುವುದನ್ನು ಕಂಡರಂತೆ. ಇದು ವಿಷ್ಣುವಿನ ಆಯುಧವಾದ ಸುದರ್ಶನ ಚಕ್ರವಲ್ಲದೆ ಬೇರೆಯಲ್ಲವೆಂದು ಲೇಖಕರು ವರ್ಣಿಸುತ್ತಾರೆ. ಇದನ್ನು ನೋಡಿ ಸ್ತಂಭೀಭೂತರಾದ ಆ ದುಷ್ಟರು ಪಾದದಿಂದ ಶಿರದವರೆಗೂ ಗಡಗಡನೆ ನಡುಗುತ್ತ ನಿಂತರು. ನಿತ್ಯಾನಂದನೇ ಅವರ ರಕ್ಷಣೆಗೆ ಮುಂದಾಗಿ ಬಂದು, ಅವರನ್ನು ನಿಗ್ರಹಿಸದೆ, ರಕ್ಷಿಸಬೇಕೆಂದು ನಿಮಾಯಿ ಪ್ರಭುವಿನಲ್ಲಿ ಕೇಳಿಕೊಂಡ. ಆಗ ನಿಮಾಯಿ ಪ್ರಭುವು ಜಗಾಯಿ ಮತ್ತು ಮಾಧಾಯಿಯರನ್ನು ಆಲಂಗಿಸಿ ಕೊಂಡ. ಆ ದಿವ್ಯ ಸ್ಪರ್ಶ, ನೀತಿಗೆಟ್ಟ ಅವರನ್ನು ಸಂತರನ್ನಾಗಿ ಪರಿವರ್ತಿಸಿತು. ಆ ದುಷ್ಟರ ಪಾಪರಾಶಿಯನ್ನು ಪ್ರಭುವೇ ಹೊತ್ತುಕೊಂಡ. ಹಿಂಸಕರಾಗಿದ್ದ ಅವರಿಬ್ಬರು ಪಶ್ಚಾತ್ತಾಪದ ಬೇಗೆಯಲ್ಲಿ ಬೇಯುತ್ತಿದ್ದರು. ಆ ಪ್ರದೇಶದ ನಿವಾಸಿಗಳ ಕ್ಷಮೆ ಕೇಳಲು ಬಯಸಿದರು. ಅದಕ್ಕಾಗಿ ಬಹಳಷ್ಟು ಜನ ಸ್ನಾನಕ್ಕಾಗಿ ನೆರೆಯುವ ಸ್ನಾನಘಟ್ಟದಲ್ಲಿ ಕುಳಿತುಕೊಂಡರು. ಜನಗಳ ಕ್ಷಮೆ ಯಾಚಿಸುತ್ತ, ತಮ್ಮ ತಪ್ಪುಗಳಿಗಾಗಿ ಶಿಕ್ಷೆಯ ರೂಪದಲ್ಲಿ ತಮ್ಮನ್ನು ಕಾಲಿನಿಂದ ತುಳಿಯುವಂತೆ ಜನರನ್ನು ಕೇಳಿಕೊಳ್ಳಲಾರಂಭಿಸಿದರು. ಕಾಲಕ್ರಮೇಣ, ಸ್ವಂತ ಶಾರೀರಿಕ ಪರಿಶ್ರಮದಿಂದ ಅವರು ನದಿಯ ದಡದಲ್ಲಿ ಘಟ್ಟವೊಂದನ್ನು ನಿರ್ಮಿಸಿದರು. ಇವತ್ತೂ ಕಾಣಬಹುದಾದ ಆ ಘಟ್ಟವನ್ನು ಜನರು ಕರೆಯುವುದು ಮಾಧಾಯಿಯ ಘಟ್ಟವೆಂದೇ.

## ಕಾಜಿಯೂ ಪರಿವರ್ತನೆಗೊಂಡ!

ಜಗಾಯಿ ಮತ್ತು ಮಾಧಾಯಿಯರ ಪರಿವರ್ತನೆಯು ಅಲ್ಲಿನ ಜನರ ಮೇಲೆ ಅದ್ಭುತವಾದ ಪರಿಣಾಮವನ್ನು ಉಂಟುಮಾಡಿತು ಮಾತ್ರವಲ್ಲ, ನಿಮಾಯಿಯ ಅನುಯಾಯಿಗಳ ಸಂಖ್ಯೆಯೂ ಅಧಿಕವಾಗುತ್ತ ಹೋಯಿತು. ನದಿಯಾ ಪಟ್ಟಣದ ಮಾರ್ಗಗಳು ಅಹೋರಾತ್ರಿಯಲ್ಲಿ ಹರಿಕೀರ್ತನೆಯ ಮಂಗಳಧ್ವನಿಯನ್ನು ಪ್ರತಿಧ್ವನಿಸಲಾರಂಭಿಸಿದವು. ನಿಮಾಯಿಯ ಮಹತಿಯನ್ನು ಮತ್ತು ಆತನ ಸಿದ್ಧಾಂತವನ್ನು ಸರ್ವಸಾಮಾನ್ಯವಾಗಿ ಎಲ್ಲ ಜನರು ಒಪ್ಪಿಕೊಳ್ಳುತ್ತಿರುವುದು ವಿದ್ವಾಂಸರೂ ಉತ್ತಮಕುಲದವರೂ ಆದ ಆ ಪ್ರದೇಶದ ಬ್ರಾಹ್ಮಣರಿಗೆ ಹಿತವಾಗಲಿಲ್ಲ. ಅದರಲ್ಲೂ ಆಧ್ಯಾತ್ಮಿಕ ವಿಷಯಗಳಲ್ಲಿ ಅವನು ಜಾತಿಮತಗಳನ್ನು ಲೆಕ್ಕಿಸದಿರುವುದು ಅವರಿಗೆ ನುಂಗಲಾರದ ತುತ್ತಾಗಿ ಪರಿಣಮಿಸಿತು. ಇದರಿಂದ ಕಾಲಕ್ರಮೇಣ ಬ್ರಾಹ್ಮಣರಾದ ತಮ್ಮ ಪ್ರಾಮುಖ್ಯ ಮತ್ತು ಮಹತ್ವಗಳು ಕಣ್ಮರೆಯಾಗುವವು ಎಂದು ಅವರು ಭಾವಿಸಿದರು.

ಹೀಗಾಗಿ ಬಂಗಾಳದ ಮುಸ್ಲಿಂ ದೊರೆಯ ಪ್ರಾದೇಶಿಕ ರಾಜ್ಯಪಾಲನಾದ ಕಾಜಿಯ ಹತ್ತಿರ ನಿಮಾಯಿಯ ವಿರುದ್ಧ ದೂರು ಕೊಡುವುದನ್ನು ಬಿಟ್ಟು ಅವರಿಗೆ ಬೇರೆ ಮಾರ್ಗವೇ ತೋಚಲಿಲ್ಲ. ಆ ಪ್ರದೇಶದ ಧಾರ್ಮಿಕ ಸಂಪ್ರದಾಯಗಳನ್ನು ಕಡೆಗಣಿಸುತ್ತಿರುವ ನಿಮಾಯಿ ಮತ್ತು ಆತನ ಅನುಯಾಯಿಗಳನ್ನು ಹೀಗೆಯೆ ಬಿಟ್ಟರೆ, ಅದು ಸಾಮಾಜಿಕ ವಿಪ್ಲವಕ್ಕೆ ಕಾರಣವಾಗಿ, ರಾಜ್ಯದ ಸ್ಥಿರತೆಗೇ ಭಂಗ ಉಂಟಾಗುವುದೆಂಬುದೇ ಅವರ ದೂರು. ಮುಸ್ಲಿಮರಿಗೆ, ಬ್ರಾಹ್ಮಣರಾಗಲೀ ವೈಷ್ಣವರಾಗಲೀ ಇಬ್ಬರೂ ಕಾಫಿರರೇ (ಜಾತಿಬಾಹ್ಯರು). ಆದರೆ ರಾಜ್ಯದ ಸ್ಥಿರತೆಗೆ ಭಂಗವುಂಟಾಗುವುದಾದರೆ, ತಾನು ಮಧ್ಯಪ್ರವೇಶಿಸುವುದು ತನ್ನ ಕರ್ತವ್ಯವೆಂದು ಕಾಜಿ ನಿರ್ಣಯಿಸಿದ.

ಹೀಗಾಗಿ ಹರಿಕೀರ್ತನೆಗಳ ಹಾಡುವಿಕೆಯನ್ನು ಒಡನೆಯೆ ನಿಲ್ಲಿಸಬೇಕೆಂದು ಆದೇಶ ಹೊರಡಿಸಿದ. ಆದರೆ ಅದು ಕಾರ್ಯಗತವಾಗಲೇ ಇಲ್ಲ. ಆದ್ದರಿಂದ ನಿಮಾಯಿ ಮತ್ತು ಅವನ ಸಂಗಡಿಗರನ್ನು ಬಂಧಿಸಬೇಕೆಂದು ಆರಕ್ಷಕರನ್ನು ಕಳುಹಿಸಿದ. ಆದರೆ ಅವರ ಸುತ್ತಲೂ ಯಾವಾಗಲೂ ಜನರ ದೊಡ್ಡ ಗುಂಪು ಇರುತ್ತಿದ್ದರಿಂದ ಅದೂ ಸಾಧ್ಯವಾಗಲೇ ಇಲ್ಲ. ಇದರಿಂದ ಕೋಪಗೊಂಡ ಕಾಜಿ ತನ್ನ ಕೆಲವು ಆಫ್ಘನ್ ಪಡೆಗಳನ್ನು ವಿಪ್ಲವಕಾರಿ ಜನರ ಮೇಲೆ ನಿರ್ದಯವಾಗಿ ಎರಗಲು ಮತ್ತು ಅವರನ್ನು ಚದುರಿಸಲು ಕಳುಹಿಸಿದ. ಆದರೆ ಕೃಷ್ಣಭಕ್ತಿ ತುಂಬಿದ್ದ ಆ ಜನರ ಹೃದಯಗಳಲ್ಲಿ ಭಯ ಹೊರಟುಹೋಗಿತ್ತು. ನಗರದ ಒಂದು ಭಾಗದಲ್ಲಿ ಅವರ ಮೇಲೆ ಹಲ್ಲೆ ನಡೆದರೆ, ಮತ್ತೊಂದು ಕಡೆ ಅವರೆಲ್ಲರೂ ಕೂಡಿ ಹರಿಕೀರ್ತನೆಯನ್ನು ನಡೆಸುತ್ತಿದ್ದರು. ಹೀಗೆ ಕೀರ್ತನೆ ಸ್ವಲ್ಪ ಕಾಲ ಮುಂದುವರಿದರೂ ಕೆಲ ದಿನಗಳ ನಂತರ ಎಲ್ಲವೂ ಸ್ಥಗಿತಗೊಂಡಿತು.

ಈಗ ಪ್ರಭು ನಿಮಾಯಿಯೆ ಈ ಸವಾಲನ್ನು ಸ್ವೀಕರಿಸಿದನು. ಅವನ ಕರೆಯ ಮೇರೆಗೆ ಜನರೆಲ್ಲ ನೆರೆದರು. ನಿಮಾಯಿಯನ್ನು ಕೇಂದ್ರವಾಗಿರಿಸಿಕೊಂಡು, ಬೃಹತ್ತಾದ ಒಂದು ಸಂಕೀರ್ತನೆಯ ಗುಂಪು ಭಕ್ತಿಯ ಭಾವೋನ್ಮಾದದಲ್ಲಿ ಕಾಜಿಯ ಮನೆಯೆಡೆಗೆ ಧಾವಿಸಿತು. ಅವನೊಡನೆ ಸಂದರ್ಶನಕ್ಕಾಗಿ ಒತ್ತಾಯಿಸಿತು ಕೂಡ. ಕಾಜಿ ಮೊದಮೊದಲು ಅಳುಕಿದನಾದರೂ, ಕಡೆಯಲ್ಲಿ ಹೊರಬಂದು ನಿಮಾಯಿಯ ಮುಂದೆ ನಿಂತ. ಅದೇನಾಯಿತೋ, ಸರ್ವಾಧಿಕಾರಿಯಾದ ಆ ಕಾಜಿಯ ಮನೋಭಾವವೇ ಪರಿವರ್ತನೆಹೊಂದಿತು! ಅವನು ವಿನೀತ ಭಾವದಿಂದ ಮಾತನಾಡಲಾರಂಭಿಸಿದ. ನಿಮಾಯಿ ಪ್ರಭುವನ್ನು 'ಹರಿ ಗೌರ' ಎಂದು ಸಂಬೋಧಿಸಿದ. ತಾನಾಗಿಯೆ ಈ ಕ್ರಮವನ್ನು ಕೈಗೊಳ್ಳಲಿಲ್ಲವೆಂದೂ, ಹಿಂದೂ ಸಮಾಜದ ನೇತಾರರು ಬಯಸಿದ್ದರಿಂದ ಹಾಗೆ ಮಾಡಬೇಕಾಯಿತೆಂದೂ ನಿವೇದಿಸಿದ. ನಂತರ ಹೀಗೆ ನುಡಿದ: "ಇರುವುದು ಒಬ್ಬನೇ ದೇವರು. ಹಿಂದೂಗಳು ಅವನನ್ನು ನಾರಾಯಣ ಎಂದು ಕರೆಯುವರು. ಅವನೇ ನಿನ್ನ ರೂಪದಲ್ಲಿ ಬಂದಿರುವನೆಂದು ಜನರು ಹೇಳುವರು. ಹೌದೇನು? " ನಂತರ ನಿಮಾಯಿ ಪ್ರಭುವು ಕಾಜಿಯತ್ತ ಬೆರಳು ತೋರಿ ಹೇಳಿದನು: "ನೀನು 'ಹರಿ', 'ಕೀರ್ತನೆ' ಮತ್ತು 'ನಾರಾಯಣ' – ಈ ಪವಿತ್ರ ಶಬ್ದಗಳನ್ನು ಉಚ್ಚರಿಸಿರುವೆ. ಅದರಿಂದಾಗಿ ನಿನ್ನ ಪಾಪಗಳೆಲ್ಲವೂ ಕಳೆದುಹೋದವು." ಕಾಜಿಯು ಒಡನೆ ಪರಿವರ್ತಿತನಾದನು. ಅವನ ಕಣ್ಣುಗಳಿಂದ ನೀರು ಧಾರಾಕಾರವಾಗಿ ಹರಿಯಿತು. ಕಾಜಿ ನಿಮಾಯಿಗೆ ಶರಣಾಗತನಾಗಿ ಅಡ್ಡಬಿದ್ದ. ಇನ್ನು ಮುಂದೆ ಹರಿಸಂಕೀರ್ತನೆಯನ್ನು ಯಾರೂ ತಡೆಯಬಾರದೆಂದು ಒಡನೆಯೇ ಆದೇಶವಿತ್ತ.

**(ಮುಂದುವರಿಯುವುದು)**

## ಪ್ರಹಸನ ಪ್ರಸಂಗ

**ರಾಮು:** ಅಲ್ಲಾ ಕಣೋ! ಇವತ್ತು ಶಾಲೆಯಲ್ಲಿ ಗೋಡೆಯ ಗಡಿಯಾರ ದಿಢೀರನೆ ಬಿದ್ದುಬಿಡ್ತು. ಸದ್ಯ, ಇನ್ನೊಂದು ಕ್ಷಣ ಮುಂಚೆ ಬಿದ್ದಿದ್ದರೆ ಮೇಡಂ ತಲೆಯ ಮೇಲೇ ಬೀಳ್ತಿತ್ತು!
**ಶ್ಯಾಮು:** ಅಯ್ಯೋ! ನಿನಗೆ ಗೊತ್ತಿಲ್ವೇ? ಆ ಗಡಿಯಾರ ಯಾವಾಗಲೂ ನಿಧಾನವಾಗಿ ಚಲಿಸುತ್ತಿತ್ತು!

***

**ಪಾದ್ರಿ:** ಮಗು, ನೀನು ಊಟಮಾಡುವ ಮುಂಚೆ ದೇವರಿಗೆ ಪ್ರಾರ್ಥನೆಯನ್ನು ಮಾಡುತ್ತಿರುವೆ ತಾನೆ?
**ಬಾಲಕ:** ಅದರ ಆವಶ್ಯಕತೆ ಇಲ್ಲ. ನನ್ನ ತಾಯಿ ರುಚಿಯಾಗಿ ಅಡುಗೆ ತಯಾರಿಸುತ್ತಾಳೆ.

***

ಒಂದು ಚಿತ್ರದ ದೃಶ್ಯದಲ್ಲಿ ನಾಯಕನು ಸತ್ತವನಂತೆ ನಟಿಸಬೇಕಿತ್ತು. ಮತ್ತೆ ಮತ್ತೆ ಅದೇ ದೃಶ್ಯವನ್ನು ನಿರ್ಮಾಪಕ ತೆಗೆಯುತ್ತಲೇ ಇದ್ದ. ಕಡೆಗೆ ಬೇಸತ್ತು ನಾಯಕನಿಗೆ ಹೇಳಿದ, 'ನಾಯಕರೆ, ಇದು ಇನ್ನೂ ನಾಟಕೀಯವಾಗಿ ಇರಬೇಕು. ನಿಮ್ಮ ಸಾವಿಗೆ ಜೀವವನ್ನು ತುಂಬಿ!'

***

**ಗಿರಾಕಿ:** ಇದೇನು ಪೂರ್ತಿ ಊಟವೇ? ನಿನ್ನೆಯ ದಿನ ಇದರ ಎರಡರಷ್ಟು ನೀಡಿದ್ದೆಯಲ್ಲ?
**ಮಾಣಿ:** ನಿನ್ನೆ ನೀವು ಎಲ್ಲಿ ಕುಳಿತಿದ್ದಿರಿ?
**ಗಿರಾಕಿ:** ಅಲ್ಲಿ, ಆ ಕಿಟಕಿಯ ಬಳಿ. ಯಾಕೆ?
**ಮಾಣಿ:** ಹಾ! ಹಾಗ್ಹೇಳಿ. ಆ ಕಿಟಕಿಯ ಹೊರಗೆ ಓಡಾಡುವ ಜನ ಹೊಟೆಲಿನ ಬಗ್ಗೆ ಒಳ್ಳೆಯ ಅಭಿಪ್ರಾಯ ಹೊಂದಲಿ, ಗಿರಾಕಿಗಳು ಹೆಚ್ಚಲಿ ಎಂದು ಅಲ್ಲಿ ಕುಳಿತವರಿಗೆ ಮಾತ್ರ ಜಾಸ್ತಿ ನೀಡುತ್ತೇವೆ!

***

**ಮೇಷ್ಟ್ರು:** ರಾಮು, ನಿನ್ನ ಬರವಣಿಗೆ ಬ್ರಹ್ಮಲಿಪಿಯಯ್ಯಾ! ಅದೇನು ಅಧ್ವಾನ! ಸ್ಪಷ್ಟವಾಗಿ, ಸುಂದರವಾಗಿ ಬರೆಯಲು ಅಭ್ಯಾಸ ಮಾಡು.
**ರಾಮು:** ಬೇಡ ಸಾರ್! ಹಾಗೆ ಮಾಡಿದರೆ ನನ್ನ ಕಾಗುಣಿತವೂ ಅಧ್ವಾನವೆಂದು ಗೊತ್ತಾಗಿಬಿಡುತ್ತದೆ!